ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ಈ ಹೇಳಿಕೆ ಮಾಡುತ್ತೇನೆ :

ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ವಿಧಾನ ಸಭಾ ಕ್ಷೇತ್ರದ ವಿಟ್ಲದಲ್ಲಿ ಒಂದು ಸರ್ಕಾರಿ ದರ್ಜಿ ಕಾಲೇಜನ್ನು ಪ್ರಾರಂಭಿಸಲು 1993-94ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದ್ದು, ಕಾಲೇಜು ನಡೆಯುತ್ತಿದೆ. ಕಾಲೇಜಿಗಾಗಿ ಸ್ವಂತ ಕಟ್ಟಡ ಇಲ್ಲದ ಕಾರಣ ಮಂಡಲ ಪಂಚಾಯತ್ ಕಟ್ಟಡದಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. ಇದಕ್ಕೆ ಒಂದು ಸ್ವಂತ ಕಾಲೇಜು ಕಟ್ಟಡ ಒದಗಿಸುವುದು ಅಗತ್ಯ. ಆದರೆ ವಿಟ್ಲ ಕಾಲೇಜಿಗೆ ಇನ್ನೂ ನಿವೇಶನ ದೊರಕಿರುವುದಿಲ್ಲ. ನಿವೇಶನ ದೊರೆತ ನಂತರ ಕಟ್ಟಡದ ಬಾಬ್ತು ಆಯವ್ಯಯದಲ್ಲಿ ಒದಗಿಸಲು ಏರ್ಪಾಡು ಮಾಡಲಾಗುವುದು.

3. ಕರ್ನಾಟಕ ರಾಜ್ಯದಲ್ಲಿನ ಕುಮ್ಕಿ, ಕಾನಾ, ಬಾಣೆ ಅರಣ್ಯ ಜಮೀನು ಬಗರ್ ಹುಕುಂ ಮಂಜೂರಾತಿಗೆ ಅರ್ಜಿಸಲ್ಲಿಸಲು ಕಾಲಾವಧಿ ವಿಸ್ತರಣೆ

ಶ್ರೀ ಕೆ. ಕುಶಾಲ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿನ ಬಗರ್ ಹುಕುಂ ಸಾಗುವಳಿದಾರರಾದ ಬಡ ಕೃಷಿ ಕೂಲಿಕಾರ್ಮಿಕ ರೈತರಿಗೆ ಕುಮ್ಕಿ, ಕಾನಾ ಬಾಣೆ ಅರಣ್ಯ ಜಮೀನುಗಳನ್ನು ಮತ್ತು ಅನಾಧೀನ ಪೊರಂಬೋಕ್ ಭೂಮಿಗಳ ದರಕಾಸ್ತು ಮಂಜೂರಾತಿ ನೀಡಲು ಅಕ್ರಮ ಸಕ್ರಮ ಸಮಿತಿಗಳಿಗೆ ಕಾನೂನಿನ ಅವಕಾಶವಿರುವುದಿಲ್ಲ. ಇದರಿಂದ ರೈತರಿಗೆ ತುಂಬಾ ಅನ್ಯಾಯವಾಗಿದೆ. ಆದುದರಿಂದ ಸದ್ರಿ ಮೇಲೆ ಹೇಳಿದ ಸರಕಾರಿ ಭೂಮಿಗಳನ್ನು ಮಂಜೂರಾತಿ ಮಾಡಲು ಈ ತನಕ ಅರ್ಜಿ ಸಲ್ಲಿಸಿದ್ದ ರೈತರಿಗೆ ಅರ್ಜಿಸಲ್ಲಿಸಲು ಹೆಚ್ಚಿನ ಕಾಲಮಿತಿಯನ್ನು ನೀಡಲು ಸರ್ಕಾರ ಕೂಡಲೇ ಕಾನೂನು ಮಾಡುವಂತೆ ಈ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳನ್ನು ಒಂದು ಸಭೆಗೆ ಕರೆಸಿದ್ದೇನೆ. ಅದರಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ವಿಷಯವನ್ನು ಸಹ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

4.ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಡಾ ಪ್ರಾಧಿಕಾರದ ನೌಕರರಿಗೆ ಸೇವಾ ಸೌಲಭ್ಯ

ಶ್ರೀ ಮನೋಹರ ಐನಾಪೂರ (ಬಳ್ಳೊಳ್ಳಿ) : ಮಾನ್ಯ ಅಧ್ಯಕ್ಷರೇ "ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಡಾ ಪ್ರಾಧಿಕಾರದಿಂದ ಖಾಯಂ ಆಗಿ ನೇಮಕಾತಿ ಹೊಂದಿ ಹತ್ತು ವರ್ಷಗಳಿಂದಲೂ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಕಾಡಾ ಕಾಯ್ದೆ 1980ರ ನಿಯಮ 5(2)ರ ಪ್ರಕಾರ ಸರ್ಕಾರಿ ನೌಕರರಿಗೆ ಸಿಗಬೇಕಾದ ಯಾವತ್ತು ಸೇವಾ ಸೌಲಭ್ಯಗಳು ಇದೂವರೆವಿಗೂ ದೊರೆಯುತ್ತಿರುವುದಿಲ್ಲ. ಈಗಾಗಲೇ ಸೇವೆಯಲ್ಲಿದ್ದು ಮರಣ ಹೊಂದಿರುವ ನಾಲ್ಕು ಸಿಬ್ಬಂದಿಗಳ ಅವಲಂಬಿತರಿಗೂ ಯಾವುದೇ ಕುಟುಂಬ ಪಿಂಚಣಿ ಮತ್ತಿತರ ಆರ್ಥಿಕ ಸೌಲಭ್ಯಗಳು ದೊರೆಯದೇ ಇರುವುದು ದುರಾದೃಷ್ಟಕರ.

ಆದುದರಿಂದ ಈಗಾಗಲೇ ಮರಣ ಹೊಂದಿರುವ ಕೃಷ್ಣಾ ಕಾಡಾ ನೌಕರರ ಅವಲಂಬಿತರಿಗೆ ಹಾಗೂ ಈ ಸಧ್ಯ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಸರ್ಕಾರಿ ನೌಕರರಿಗೆ ಇರುವ ಎಲ್ಲಾ ಸವಲತ್ತುಗಳನ್ನು ವಿಸ್ತರಿಸುವ ಕ್ರಮ ಯಾವತ್ತು ಕೈಗೊಳ್ಳುವಿರಿ? ಹಾಗಿದ್ದಲ್ಲಿ ನಿರ್ದಿಷ್ಟ ಅವಧಿ ತಿಳಿಸುವಿರಾ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಕಾಡಾ ಕಾಯ್ದೆಗನುಗುಣವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಬೇಕಾಗಿದ್ದು

ಕಾಡಾದ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ತನ್ನ ವರದಿಯನ್ನು ಈಗ ಸಲ್ಲಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ. "ವೃಂದ ಮತ್ತು ನೇಮಕಾತಿ ನಿಯಮಗಳ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

5. ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ದುರಸ್ತಿಗೆ ಹಣ ಬಿಡುಗಡೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ರಿಪೇರಿ ಹಾಗೂ ಹೂಳೆತ್ತುವ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ರೂ. 6 ಲಕ್ಷ ಮಂಜೂರು ಆಗಿದೆ. ಆ ಕೆರೆಯ ಕೆಲಸ ಸಣ್ಣ ನೀರಾವರಿ ಇಲಾಖೆಯ ಮುಖಾಂತರ ಆಗ ಬೇಕಾಗಿದೆ. ಇದುವರೆಗೂ ಕೆಲಸ ಆರಂಭ ಆಗಿಲ್ಲ. ಸಣ್ಣ ನೀರಾವರಿ ಇಲಾಖೆ ಏಕೆ ಇದುವರೆಗೆ ಕೆಲಸ ಆರಂಭ ಮಾಡಿಲ್ಲ? ಯಾವಾಗ ಆರಂಭ ಮಾಡುತ್ತೀರಿ? ಯಾವಾಗ ಕೆಲಸ ಮುಕ್ತಾಯ ಗೊಳಿಸುತ್ತೀರಿ?

ಶ್ರೀ ಓಂ ಪ್ರಕಾಶ್ ಕಣಗಲಿ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ರಿಪೇರಿ ಮತ್ತು ಹೂಳೆತ್ತುವ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಸಣ್ಣ ನೀರಾವರಿ ಇಲಾಖೆಗೆ ಯಾವ ಪ್ರಸ್ತಾವನೆಯೂ ಬಂದಿಲ್ಲ. ಆದಕಾರಣ ಸಣ್ಣ ನೀರಾವರಿ ಇಲಾಖೆಯಿಂದ ಈ ಕೆಲಸವನ್ನು ಆರಂಭಿಸಲು ಕ್ರಮ ಕೈಗೊಂಡಿಲ್ಲ. ಆದರೆ ಸದರಿ ಕೆರೆಯು ಭದ್ರಾ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಇರುವುದರಿಂದ ಇದರ ದುರಸ್ತಿ ಮತ್ತು ಹೂಳೆತ್ತುವ ಕಾರ್ಯವನ್ನು ಭದ್ರಾ ಯೋಜನೆಯ ಅಧಿಕಾರಿಗಳೇ ಕೈಗೊಳ್ಳ ಬೇಕಾಗುತ್ತದೆ. ಈ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಕೋರಿಕೆ ಬಂದಿದ್ದರೆ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಭದ್ರ ಯೋಜನೆಯ ಇಂಜಿನಿಯರುಗಳಿಗೆ ಆದೇಶ ನೀಡಲಾಗುವುದು.

6. ತುಮಕೂರು ಜಿಲ್ಲೆಗೆ ಕುಡಿಯುವ ನೀರಿನ ಸರಬರಾಜಿಗಾಗಿ ಹಣ ಬಿಡುಗಡೆ

Sri S. Shafi Ahmed : (Tumkur) : Sir, Due to the shortfall of rainfall in Tumkur district, there is an acute shortage of drinking water. No funds have been released under the Scarcity Relief fund to Tumkur district.

Immediately, Rs. 1.50 Crores to Tumkur District and Rs. 25 lakhs exclusively to C.M.C. Tumkur may be released for the salvation of drinking water problem by drilling the Borewells and also to deepen the existing borewells.

ಶ್ರೀ ಧರ್ಮಸಿಂಗ್ : (ಕಂದಾಯ ಹಾಗೂ ಸಮಾಜಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ ರಾಜ್ಯದಲ್ಲಿ 1993ನೇ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಮುಂಗಾರು ಮಳೆಯ ಕೊರತೆಯಿಂದಾಗಿ 16 ಜಿಲ್ಲೆಗಳ 50 ತಾಲ್ಲೂಕುಗಳು ಅಭಾವಕ್ಕೆ ತುತ್ತಾಗಿದ್ದುವು. ಈ ಪೈಕಿ ತುಮಕೂರು ಜಿಲ್ಲೆಯ 8 ತಾಲ್ಲೂಕುಗಳೂ ತೀವ್ರ ಅಭಾವಕ್ಕೊಳಗಾಗಿದ್ದವು. ತುಮಕೂರು ಜಿಲ್ಲೆಯ ಈ ಅಭಾವ ಪೀಡಿತ ಪ್ರದೇಶಗಳಲ್ಲಿ ಬರ ಪರಿಹಾರ ಕಾರ್ಯಗಳಿಗಾಗಿ ದಿನಾಂಕ 1.4.1993 ರಿಂದ 7.2.1994ರವರೆಗೆ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ.

ಅ)	ಕುಡಿಯುವ ನೀರಿನ ಪೂರೈಕೆಗಾಗಿ	-	ರೂ. 120.00 ಲಕ್ಷ
ಆ)	ಉದ್ಯೋಗ ಸೃಜನೆಗಾಗಿ	-	ರೂ. 65.00 ಲಕ್ಷ
	ಒಟ್ಟು :		ರೂ. 185.00 ಲಕಗಳು